
ಟಿ.ಎಂ. ರಮೇಶ



# ಜಾರು

ಗೋಪಾಲ ಭಟ್ಟರು ಬಚ್ಚಲಲ್ಲಿ ಆಕಸ್ಮಿಕವಾಗಿ ಜಾರಿ ಬಿದ್ದುಬಿಟ್ಟಿದ್ದರು. ಗಾಯವೇನೂ ಆಗದೆ ಇದ್ದರು ಕಾಲು ತಿರುಚಿದಂತಾಗಿ ಉಳುಕಿನ ನೋವು ಉಳಿದೇ ಹೋಯಿತು.

ಇಳಿವಯದ ಗಂಡ ಹೆಂಡಿರಿಬ್ಬರೆ ಇರುವ ಈ ದೊಡ್ಡ ಮನೆಯಲ್ಲಿ ಈ ಆಕಸ್ಮಿಕ ಅವರಿಗೆ ಬಹಳಷ್ಟು ತೊಂದರೆ ಕೊಟ್ಟದ್ದಂತು ನಿಜ. ಆಕಸ್ಮಿಕ ಎಂದುಕೊಂಡರೂ ಒಂದೊಂದು ಸಮಯದಲ್ಲಿ ಅದರಿಂದಾದ ಆಘಾತ ಮನಸ್ಸಿಗೆ ಬಹು ಕಾಲ ನೋವು ಉಳಿಸಿ ಹೋಗುತ್ತದೆಯಲ್ಲ, ಈಗಲೂ ಹಾಗೆಯೇ. ಇದಾಗಿ ವಾರವಾಗಿದೆ, ಇವತ್ತೇನೋ ನೆನಪಾಗಿದೆ, ರೂಮಿನ ಬುಕ್‌ಶೆಲ್ಫಿನಲ್ಲಿರುವ ಆ ಪುಸ್ತಕ ತೆರೆದು ಅದನ್ನ ಸ್ಪಷ್ಟೀಕರಿಸಿಕೊಳ್ಳೋಣವೆಂದು ಕುರ್ಚಿಯಿಂದೆದ್ದು ಅದನ್ನ ತರುವಷ್ಟರಲ್ಲಿ ಪೆಟ್ಟಾದ ಕಾಲಿನ ನೋವು ಕೆಣಕಿ ಕರುಳ ಕಿತ್ತಷ್ಟು ಹಿಂಸೆಯಾಯಿತು. ಯಾವ ನೋವಾದರು ಇರಲಿ, ಮೂತ್ರಕ್ಕೊ, ಸಂಡಾಸಿಗೋ ಎದ್ದು ಹೋಗಲೂ ಪರಾವಲಂಬಿಯಾಗಿಸುವ ಈ ಕಾಲು ನೋವು ಬೇಡವಪ್ಪ ಎಂದು ಮನಸ್ಸು ಚೀರುತ್ತದೆ... ಮಡದಿ ರುಕ್ಮಿಣಿ ಅಡಿಗೆ ಕೆಲಸದಲ್ಲಿ ನಿರತಳಾಗಿದ್ದಾಳೆ. ವಯಸ್ಸಾಗಿ ಸೊಂಟ ನೋವಿರುವ ಅವಳನ್ನೂ ಎಷ್ಟು ಅಂತ ಗೋಳು ಹೊಯ್ದುಕೊಳ್ಳುವುದು ಅಂತ ತನಗೆ ಬೇಕೆನ್ನಿಸುವ ನಾಲ್ಕು ಗ್ರಂಥಗಳನ್ನ ಬೆಳಿಗ್ಗೆಯೇ ತರಿಸಿ ಹತ್ತಿರದಲ್ಲಿಯೇ ಇರಿಸಿಕೊಂಡಾಗಿದೆ. ಮತ್ತವಳ ಕರೆದು ಕಿರಿಕಿರಿಕುಂಟ ಗಂಡನಾಗುವುದೆ?